# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | THURSDAY | 23-6-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


### ಜಾಗತಿಕ ಜೋಳ ಉತ್ಪಾದನೆ ಇಳಿಕೆ ಸಾಧ್ಯತೆ

USDA ಅಂದಾಜು ವರದಿಯ ಪ್ರಕಾರ 2022-23 ನೇ ಸಾಲಿನಲ್ಲಿ ಜಾಗತಿಕ ಜೋಳ ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಯಿದೆ. ಜಾಗತಿಕ ಜೋಳ ಉತ್ಪಾದನೆ 2022-23 ರಲ್ಲಿ 2021-22 ಕ್ಕಿಂತ 2.5 ಶೇಕಡಾ ಇಳಿಕೆಯಾಗಲಿದೆಯೆನ್ನಲಾಗಿದೆ. ಭಾರತ ಸೇರಿದಂತೆ ಉಕ್ರೈನ್, ಚೀನಾ, ಯುರೋಪಿಯನ್ ಒಕ್ಕೂಟ ಹಾಗೂ ಯು.ಎಸ್‌ಗಳಲ್ಲಿ 2022-23 ರಲ್ಲಿ ಜೋಳ ಉತ್ಪಾದನೆ ಇಳಿಕೆಯಾಗಲಿದೆಯೆನ್ನಲಾಗಿದೆ.

### ಮಲೇಶಿಯನ್ ಪಾಮೆಣ್ಣೆ ದರ 6 ತಿಂಗಳ ಕನಿಷ್ಠ ಮಟ್ಟಕ್ಕೆ

ಮಲೇಶಿಯನ್ ಪಾಮೆಣ್ಣೆ ದರ 6 ಹಿಂದಿನ 6 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿದು 4890 ರಿಂಗಿಟ್ಸ್‌ಗಳ(ಟನ್‌ಗೆ) ದರ ಹೊಂದಿತ್ತು. ($ 112.37) 20/6/2022 ರಂದು ಇಂಡೋನೇಶಿಯಾ 1.4 ಮಿಲಿಯನ್ ಟನ್ ಪಾಮೆಣ್ಣೆ ರಫ್ತು ಮಾಡಲು ಪರವಾನಗಿ ನೀಡಿದೆಯೆನ್ನಲಾಗಿದೆ. ಮಲೇಶ್ಯಾದ ಜೂನ್ 1-20 ರ ತನಕದ ಪಾಮೆಣ್ಣೆ ರಫ್ತು 10 ರಿಂದ 17 ಶೇಕಡಾ ಕುಸಿತವಾಗಿದೆಯೆನ್ನಲಾಗಿದೆ.

### ಬ್ರೆಜಿಲ್‌ನಿಂದ ಚೀನಾಕ್ಕೆ ಸೋಯಾಬೀನ್ ಆಮದು ಇಳಿಕೆ, ಯು.ಎಸ್‌ನಿಂದ ಆಮದು ಹೆಚ್ಚಳ

ಮೇ ತಿಂಗಳಲ್ಲಿ ಚೀನಾ ಬ್ರೆಜಿಲ್‌ನಿಂದ ಚೀನಾಕ್ಕೆ ಸೋಯಾಬೀನ್ ಆಮದು ಹಿಂದಿನ ವರ್ಷ ಇದೇ ತಿಂಗಳಲ್ಲಿದ್ದ 9.23 ಮಿಲಿಯನ್ ಟನ್‌ಗಳಿಂದ ಈ ವರ್ಷ ಮೇ ಯಲ್ಲಿ 7.79 ಮಿಲಿಯನ್ ಟನ್‌ಗೆ ಇಳಿಕೆಯಾಗಿದೆ. ಯು.ಎಸ್ ನಿಂದ 244.431 ಟನ್ ಗಳಿಂದ 1.73 ಮಿಲಿಯನ್ ಟನ್‌ಗಳಿಗೆ ಹೆಚ್ಚಳವಾಗಿದೆ.

### ಮಹಾರಾಷ್ಟ್ರದಲ್ಲಿ ಬೇಳೆಕಾಳು ಬಿತ್ತನೆ ಇಳಿಕೆ ಸಾಧ್ಯತೆ

ಈ ಋತುವಿನ ಖಾರೀಫ್ ಬೆಳೆಯ ಬಿತ್ತನೆ ಆರಂಭವಾಗಿದ್ದು, ಮಹಾರಾಷ್ಟ್ರದಲ್ಲಿ ಬೇಳೆಕಾಳು ಬಿತ್ತನೆ ಪ್ರದೇಶ ಇಳಿಕೆ ಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಹೆಸರು, ತೊಗರಿ ಇತ್ಯಾದಿಗಳ ಬಿತ್ತನೆ ಬೀಜಕ್ಕೆ 30-40 ಶೇಕಡಾ ಬೇಡಿಕೆ ಇಳಿಕಯಾಗಿದೆಯೆನ್ನಲಾಗಿದೆ. ಹೆಚ್ಚಿನ ಆದಾಯವಿರುವ ಸೋಯಾಬೀನ್ ಹಾಗೂ ಹತ್ತಿ ಬೆಳೆಗಳತ್ತ ಕೃಷಿಕರು ತಿರುಗಿರುವುದರಿಂದ ಬೇಳೆಕಾಳು ಬೆಳೆಯುವ ಪ್ರದೇಶದಲ್ಲಿ ಇಳಿಕೆಯಾಗಬಹುದೆನ್ನಲಾಗಿದ್ದು, ಉತ್ಪಾದನೆಯಲ್ಲಿ ಪರಿಣಾಮ ಬೀರಬಹುದಾಗಿದೆ.

### ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 6 ತಿಂಗಳ ಕನಿಷ್ಠ ಮಟ್ಟಕ್ಕಿಳಿಕೆ

22/6/2022 ರಂದು ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 10 ಶೇಕಡಾ ಇಳಿಕೆ ಹೊಂದಿ ಹಿಂದಿನ 6 ತಿಂಗಳ ಕನಿಷ್ಠ ಮಟ್ಟಕ್ಕಿಳಿದಿದೆ. ಹಾಗೇಯೇ ದಲಿಯನ್ ಹಾಗೂ ಚಿಕಾಗೋ ಮಾರುಕಟ್ಟೆಗಳಲ್ಲಿ ಸೂರ್ಯಕಾಂತಿ ಎಣ್ಣೆ ಹಾಗೂ ಸೋಯಬೀನ್ ಎಣ್ಣೆ ದರಗಳೂ ಇಳಿಕೆಯಾಗಿವೆ. ಇಳಿಕೆಯಾದ ರಫ್ತು, ಸೋಯಾಬೀನ್ ಬೆಳೆಯುವ ದೇಶಗಳಲ್ಲಿ ಉತ್ತಮ ಹವಾಮಾನದಿಂದ ಉತ್ತಮ ಬೆಳೆಯ ನಿರೀಕ್ಷೆಯಿಂದ, ಇಂಡೋನೇಶಿಯಾದಿಂದ ಹೆಚ್ಚುತ್ತಿರುವ ಪಾಮೆಣ್ಣೆ ರಫ್ತು ದರ ಇಳಿಕೆಗೆ ಕಾರಣವೆನ್ನಲಾಗಿದೆ.

### ಜೋಳ ದರ ಸ್ಥಿರ

ಪ್ರಮುಖ ದೇಶೀ ಮಾರುಕಟ್ಟೆಗಳಲ್ಲಿ ಜೋಳ ದರ ಸ್ಥಿರವಿದೆ.

### ಬೇಳೆಕಾಳು ಹೊರತುಪಡಿಸಿ ಹೆಚ್ಚಿನ ಕೃಷಿ ಉತ್ಪಾದನೆಗಳ ದರ ಕನಿಷ್ಠ ಬೆಂಬಲ ಬೆಲೆಗಿಂತ ಹೆಚ್ಚಳದಲ್ಲಿದೆ

ಬೇಳೆಕಾಳು ಹೊರತುಪಡಿಸಿ ಇತರ ಹೆಚ್ಚಿನ ಕೃಷಿ ಉತ್ಪಾದನೆಗಳ ದರ ಕನಿಷ್ಠ ಬೆಂಬಲ ಬೆಲೆಗಿಂತ ಅಧಿಕವಿದೆಯೆನ್ನಲಾಗಿದೆ. ಮುಕ್ತ ಆಮದಿನಿಂದ ಬೇಳೆಕಾಳು ಯಥೇಚ್ಛ ದೊರೆಯುತ್ತಿದ್ದು, ಬೇಳೆಕಾಳು ದರ ಕಡಿಮೆಯಿದೆಯೆನ್ನಲಾಗಿದೆ. ಇದರಿಂದ ಬೆಳೆಗಾರರಿಗೆ ಬೆಳೆಯುವ ಉತ್ಸಾಹಕ್ಕೆ ಹಿನ್ನಡೆಯಾಗುವ ಸಾಧ್ಯತೆಯಿದೆ. ಬೆಳೆಗಾರರು ಇತರ ಲಾಭದಾಯಕ ಬೆಳೆಗಳತ್ತ ಹೊರಳುವ ಸಾಧ್ಯತೆಯಿದೆ.